ಈ) ವಿಮೆಯಿಂದ ಈವರೆಗೆ ರೂ. 6,42,870-00 ಬಂದಿರುತ್ತದೆ.

ಉ) ವಿಮೆ ಹಣದಿಂದ ಚಿನ್ನಾಭರಣ ಕಳೆದುಕೊಂಡ ಸದಸ್ಯರಿಗೆ ಪ್ರಮಾಣಬದ್ಧವಾಗಿ ಪರಿಹಾರ ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಮುಲ್ಕಿ, ಬೆಳ್ತಂಗಡಿ, ಚಾರ್ಮಡಿ ಮೂಲಕ ಚಿಕ್ಕಮಗಳೂರು ತಲುಪುವ ಬಸ್ಸು ನಿಲ್ಲಿಸಿರುವುದರ ಕುರಿತು.

2815 - ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮುಲ್ಕಿ, ಬೆಳ್ತಂಗಡಿ, ಚಾರ್ಮಡಿ ಮೂಲಕ ಚಿಕ್ಕಮಗಳೂರು ತಲುಪುವ ಬಸ್ಸಿನ ಚಲಾವಣೆಯನ್ನು ನಿಲ್ಲಿಸಲು ಕಾರಣವೇನು?*

ಆ) *ಕಳೆದ 20 ವರ್ಷಗಳಿಂದ ಈ ಭಾಗದ ಜನರಿಗೆ ಉಪಯುಕ್ತ ಸೇವೆ ಸಲ್ಲಿಸಿದ ಈ ಬಸ್ಸಿನ ಚಲಾವಣೆ ರದ್ದುಗೊಳಿಸಿರುವುದರಿಂದ ಜನರಿಗೆ ತೊಂದರೆ ಆಗಿರುವ ಬಗ್ಗೆ ಸರ್ಕಾರಕ್ಕೆ ಮನವಿಗಳೇನಾದರೂ ಬಂದಿವೆಯೇ?*

ಇ) *ಈ ಭಾಗದಲ್ಲಿ ಪುನಃ ಬಸ್ಸು ಚಲಾವಣೆ ಪ್ರಾರಂಭಿಸಲಾಗುವುದೆಂದು ಮಂತ್ರಿಗಳು ಇತ್ತ ಆಶ್ವಾಸನೆ ಯಾವಾಗ ಕಾರ್ಯಗತ ಮಾಡಲಾಗುವುದು?*

ಈ) *ಮುಲ್ಕಿಯಿಂದ ಬೆಂಗಳೂರಿಗೆ ಸುಖಾಸೀನ ಬಸ್ಸು ಬೇಕೆನ್ನುವ ಈ ಭಾಗದ ಜನರ ಮನವಿಯನ್ನು ಸರ್ಕಾರ ಯಾವಾಗ ಕಾರ್ಯಗತಗೊಳಿಸುವುದು?*

ಶ್ರೀ ಅಜೀಜ್ ಸೇತ್ (ಸಾರಿಗೆ ಸಚಿವರು) :

ಅ) ಮುಲ್ಕಿ-ಚಿಕ್ಕಮಗಳೂರು ಮಾರ್ಗ ಸಂಚರಿಸುತ್ತಿದ್ದ ಬಸ್ಸು ಹೆಚ್ಚು ಜನಪ್ರಿಯವಾಗದ ಕಾರಣ ರದ್ದುಪಡಿಸಲಾಗಿದೆ

ಆ) ಹೌದು.

ಈ) ಈ ಮಾರ್ಗದ ಬಸ್ಸು ಸಂಚಾರವನ್ನು 1991ರ ಅಕ್ಟೋಬರ್ ತಿಂಗಳಿನಿಂದ ಪುನಾರಂಭಿಸಲಾಗುವುದು.

ಈ) ಮಾರ್ಗ ಸಮೀಕ್ಷೆಯ ಪ್ರಕಾರ ಸುವಿಹಾರಿಯ ಅವಶ್ಯಕತೆ ಇಲ್ಲದಿರುವುದು ಸ್ಥಿರಪಟ್ಟಿದೆ.

ಭೂ ಬ್ಯಾಂಕ್‌ನ ಜೊತೆಗೆ ಅಪೆಕ್ಸ್ ಬ್ಯಾಂಕ್‌ನ್ನು ವಿಲೀನಗೊಳಿಸುವುದರ ಬಗ್ಗೆ

2791 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಹಾಗೂ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕುಗಳ ಕಾರ್ಯ ಒಂದೇ ಆಗಿರುವುದು ನಿಜವಲ್ಲವೇ?*

ಆ) *ಈ ಎರಡೂ ಬ್ಯಾಂಕುಗಳು ಬೇರೆ ಬೇರೆಯಾಗಿರುವುದರಿಂದ ಸಿಬ್ಬಂದಿ ನಿರ್ವಹಣೆ ವೆಚ್ಚ ಹೆಚ್ಚಿರುವುದರಿಂದ ಈ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ಅಪೆಕ್ಸ್ ಬ್ಯಾಂಕನ್ನು ಭೂ ಬ್ಯಾಂಕಿನೊಂದಿಗೆ ವಿಲೀನಗೊಳಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತದೆಯೇ?*

ಇ) *ಇಲ್ಲದಿದ್ದಲ್ಲಿ ಕಾರಣಗಳೇನು?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು) :

ಅ) ಅಲ್ಲ.

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಸಾರಿಗೆ ಸಂಸ್ಥೆಯ ಬಸ್ ಪಾಸುಗಳನ್ನು ಕಡಿತ ಮಾಡುವ ಬಗ್ಗೆ

2872 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಾರಿಗೆ ಸಂಸ್ಥೆಯಲ್ಲಿ ಕೊಟ್ಟಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಡಿಪೋವಾರು ವಿವರಗಳನ್ನು ಕೊಡುವುದು?*

ಆ) *ಇದರಿಂದ ಸಾರಿಗೆ ಸಂಸ್ಥೆಗೆ ಆಗಿರುವ ಹೊರೆ ಎಷ್ಟು?*

ಇ) *ಅವುಗಳನ್ನು ಕಡಿತ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) 1991-92ನೇ ಸಾಲಿನ ಆಗಸ್ಟ್‌ವರೆಗೆ 8,31,719 ಪಾಸುಗಳನ್ನು ನೀಡಲಾಗಿದೆ. ಡಿಪೋವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 1991-92ರಲ್ಲಿ ಸುಮಾರು 70.00 ಕೋಟಿ ರೂಪಾಯಿಗಳು.

ಇ) ಇಲ್ಲ.

ಅನುಬಂಧ

ವಿದ್ಯಾರ್ಥಿಗಳಿಗೆ 1991-92ನೇ ಸಾಲಿನಲ್ಲಿ ಆಗಸ್ಟ್ 1991ರವರೆಗೆ ಕೊಟ್ಟಿರುವ ಉಚಿತ ಮತ್ತು ರಿಯಾಯಿತಿ ಪಾಸುಗಳ ಘಟಕವಾರು ಪಟ್ಟಿ

ಕ್ರಮ ಸಂಖ್ಯೆ	ವಿಭಾಗ	ಘಟಕ	ಉಚಿತ ಪಾಸುಗಳು	ರಿಯಾಯಿತಿ ಪಾಸುಗಳು
1	2	3	4	5
1)	ಬಿಜಾಪುರ	ಬಿಜಾಪುರ	1955	10571
2)		ಜಮಖಂಡಿ	-	6338
		ಬಾಗಲಕೋಟೆ	-	5070
		ಅಥಣಿ	-	7766
		ಮುದ್ದೇಬಿಹಾಳ್	986	5000
		ಬಾದಾಮಿ	-	4121
		ಇಳಕಲ್	-	2561
		ಇಂಡಿ	-	1501
		ಒಟ್ಟು	**2941**	**42928**
2)	ಗುಲ್ಬರ್ಗಾ	ಯಾದಗೀರ್	164	2993
		ಶಹಾಪುರ	74	5491
		ಚಿಂಚೋಳಿ	3	1516